ಹೇಳಿದರೆ, ಇನ್ನೂ ಕೆಲವರು ಆಕೆಗಿದ್ದ ಮಾಸಿಕ ಖಿನ್ನತೆಯ ಬಗ್ಗೆ ತಿರುಗಾಮುರುಗಾ ಸುದ್ದಿಯನ್ನು ನಿರಂತರವಾಗಿ ರಂಗುರಂಗಾಗಿ ಬಿತ್ತರಿಸುತ್ತಿದ್ದರು.

ಸಾಲಿಹಾಳ ಯಾವುದೇ ಬೆದರಿಕೆಗೆ ಮಣಿಯದೇ ಅವಳ ಎತ್ತರದ ಧ್ವನಿಯನ್ನು ಕೂಡ ಲೆಕ್ಕಿಸದೆ ಮೆಹೆಕ್ ಟೀವಿಗೆ ಅಂಟಿ ಕುಳಿತಿದ್ದಳು. ಅವಳ ಜೊತೆಯಲ್ಲಿ ಎಷ್ಟೇ ನಮ್ರವಾಗಿ ವರ್ತಿಸಬೇಕೆಂದು ಸಾಲಿಹಾ ತೀರ್ಮಾನಿಸಿದ್ದರೂ ಕೂಡ ಇಂದಿನ ವರ್ತನೆಯನ್ನು ಕಂಡು ಸಾಲಿಹಾಳ ಸ್ಥೈರಣೆ ಮೀರಿತ್ತು. ಅವಳು ರಿಮೋಟ್‌ಗಾಗಿ ಅತ್ತ ಇತ್ತ ಕಣ್ಣು ಹಾಯಿಸಿದಳು. ಅವಳ ಆ ವರ್ತನೆಯನ್ನು ನಿರೀಕ್ಷಿಸಿದ್ದ ಮೆಹೆಕ್ ಅದನ್ನು ಎಲ್ಲೋ ಅಡಗಿಸಿಟ್ಟು ಮತ್ತೆ ಟೀವಿಗೆ ಅಂಟಿ ಕುಳಿತಳು. ಅವಳ ಚರ್ಯೆಯನ್ನು ಕಂಡು, ಸಹಿಸಲಸಾಧ್ಯವಾಗಿ ಮತ್ತೆ ತನ್ನನ್ನು ತಾನೇ ಸಂಭಾಳಿಸಿಕೊಂಡು ಸಾಲಿಹಾ ಅಲ್ಲಿಂದ ಅಡಿಗೆ ಮನೆಯತ್ತ ನಡೆದಳು.

ಅವಳ ಮನ ಹಿಂದಕ್ಕೋಡಿತು. ಅದೊಂದು ದುರ್ದಿನ. ತನ್ನ ಮಗಳ ಜೀವನಕ್ಕೆ ಕರಾಳ ಛಾಯೆ ಬಂದೆರಗಿದ ಆ ದಿನವನ್ನು ಅವಳು ಮರೆಯಲು ಸಾಧ್ಯವೇ ಇರಲಿಲ್ಲ. ಆ ದಿನ ಹಿರಿಯವಳಾದ ನಜ್ಮಾ ಕಾಲೇಜಿಗೆ ಹೋಗಿದ್ದಳು. ಮೆಹೆಕ್ ಬೆಳಗಿನಿಂದಲೂ ತಲೆನೋವು ಎಂದು ತನ್ನ ಕೋಣೆಯಲ್ಲಿಯೇ ಆಶ್ರಯ ಪಡೆದಿದ್ದಳು. ಒಂದು ಗಂಟೆಯಾಗಿರಬಹುದು. ಹತ್ತಿರದ ಮಸೀದಿಯಿಂದ ಅಜಾನ್ ಧ್ವನಿ ಕೇಳಿ ಬರುತಿತ್ತು. ಸಾಲಿಹಾ ಲಗುಬಗೆಯಿಂದ ಅಡಿಗೆಯನ್ನು ಮುಗಿಸಿ ಇನ್ನು ನಮಾಜ್‌ಗೆ ಹೋಗಬೇಕೆಂದು ಕೈಕಾಲು ತೊಳೆದು ವಜೂ ಮಾಡಿಕೊಂಡು ಚಾಪೆಯ ಮೇಲೆ ಜಾನಮಾಜನ್ನು ಹಾಸುತಿದ್ದಳು. ಅಷ್ಟರಲ್ಲೇ ಮನೆಯ ಡೋರ್ ಬೆಲ್ ಸದ್ದು ಮಾಡಿತು. ಅವಳು ಹಾಗೆಯೇ ಬಂದು ಬಾಗಿಲನ್ನು ತೆಗೆದಾಗ ಒಳ ಪ್ರವೇಶಿಸಿದ ಬುರ್ಖಾಧಾರಿಣಿ ಹೊರ ಕೋಣೆಯಲ್ಲಿಯೇ ಕುಳಿತಳು. ಬಿಸಿಲಿನಲ್ಲಿ ಬಂದಿದ್ದರಿಂದ ಆಕೆ ನಿಕಾಬನ್ನು ಎತ್ತಿ ತಲೆ ಮೇಲೆ ಹಾಕಿದಳು. ಆ ಮೇಲ್‌ವಸ್ತ್ರವನ್ನು ಸರಿಸಿದೊಡನೆಯೆ ಬಳ ಬಳನೆ ಬೆವರುತ್ತಿದ್ದ ಆಕೆಯ ಮೋರೆ ಕಾಣಿಸಿತು. ಎಲ್ಲೋ ಈ ಮುಖವನ್ನು ನೋಡಿದ್ದೇನೆ ಎಂದು ಸಾಲಿಹಾಳಿಗೆ ಹೊಳೆಯಿತು. ಆದರೆ ಎಲ್ಲಿ ಏನು ಯಾವಾಗ ಎಂಬ ವಿವರಗಳು ಆಕೆಯಲ್ಲಿ ಮೂಡಿ ಬರಲಿಲ್ಲ. ಆಕೆಯ ಬೆವತ ಮುಖವನ್ನು ನೋಡಿದ ಕೂಡಲೇ ಒಂದು ಲೋಟ ನೀರನ್ನಾದರೂ ಕೊಡೋಣವೆಂದು ಹಾಗೆಯೇ ನಿಂತಳು. ಬಂದಾಕೆ ಕೂಡಾ ಸಂಕೋಚವನ್ನು ಅಪ್ಪಿಕೊಂಡು ಅದರ ದುರ್ಬಲ ಆಸರೆಯಲ್ಲಿಯೇ ಕುಗ್ಗಿದಂತೆ ಕಂಡುಬಂದಳು.

ಬಾಗಿಲನ್ನು ಬಂದ್ ಮಾಡಿದವಳೇ ಆಕೆ ನಿಂತಲ್ಲಿಯೇ ನಿಂತು ಆ ಪುಟ್ಟ ಸಿಟ್‌ಔಟನ್ನು ನಿರುಕಿಸಿದಳು ಮತ್ತು ತನ್ನನ್ನು ಕೂರಲು ಹೇಳುವರೇ ಎಂಬ ನಿರೀಕ್ಷೆಯೊಂದಿಗೆ ನಿಂತೇ ಇದ್ದಳು. ಅಂತೆಯೇ ಸಾಲಿಹಾಳನ್ನು ಕಂಡು ಆಕೆ ಸಲಾಮ್ ಮಾಡಿದಳು. ಅದಕ್ಕೆ ಪ್ರತ್ಯುತ್ತರವನ್ನು ನೀಡಿದ ಸಾಲಿಹಾ, “ಏನು ಬೇಕಿತ್ತು?” ಎಂದು ಕೇಳಿದಳು.

ಆಕೆ ನೇರವಾಗಿ ಸಾಲಿಹಾಳ ಮುಖವನ್ನೇ ನೋಡುತ್ತಾ, “ನಾನು ಒಂದಿಷ್ಟು ಮಾತನಾಡಬೇಕಿತ್ತು. ಕೂರಲಾ?” ಎಂದು ಕೇಳಿದಳು.

ಸಾಲಿಹಾ ಕೂಡ ನಿರಾಳವಾಗಿ ಅವಳ ಎದುರಿಗೆ ಇದ್ದ ಕುರ್ಚಿಯಲ್ಲಿ ಕೂರುತ್ತಾ, “ಕೂತುಕೊಳ್ಳಿ” ಎಂದು ಹೇಳಿದಳು. ಮತ್ತು ಆಕೆ ಬಂದಿರುವ ಕಾರಣವನ್ನು ಕೇಳಲೆಂಬ ನಿರೀಕ್ಷೆಯಲ್ಲಿ ಅವಳ ಮುಖವನ್ನು ಪ್ರಶ್ನಾರ್ಥಕವಾಗಿ ನಿಟ್ಟಿಸತೊಡಗಿದಳು. ಬಂದಾಕೆ ಕ್ಷಣ ಕಾಲ ತಡೆದು, “ನಾನು ಆಮಿನಬೀ ಎಂದು; ಇಲ್ಲೇ ಪಕ್ಕದ ರಸ್ತೆಯಲ್ಲಿ ನಮ್ಮ ಮನೆ ಇದೆ”.

“ಯಾವ ಪಕ್ಕದ ರಸ್ತೆ?”

“ಇಲ್ಲೇ ನ್ಯಾಷನಲ್ ಹೋಟೆಲ್ ಅಂತ ಇದೆಯಲ್ಲ, ಅದರಿಂದ ಮೂರನೇ ಮನೆ ನಮ್ಮದು.”

‘ಸುಡುಗಾಡು ರಸ್ತೆ’ ಸಾಲಿಹಾ ಮನದಲ್ಲಿಯೇ ಅಂದುಕೊಂಡಳು.